ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಶ್ರೀಮತಿ ಬಿ.ಎಚ್. ಕೋಮಲ -ವಿರುದ್ಧ ಕರ್ನಾಟಕ ಸರ್ಕಾರದ ಪ್ರತಿನಿಧಿಯಾಗಿ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 15530/2017 (ಎಲ್ಬಿ-ಇಎಲ್ಇ), ದಿನಾಂಕ 2 ನೇ ಜುಲೈ, 2019.

ಆಜ್ಞೆ

ನ್ಯಾಯಮೂರ್ತಿ ಶ್ರೀ ಜಿ. ನರೇಂದರ್:

1. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ, ಪ್ರತ್ಯರ್ಜಿದಾರಸಂಖ್ಯೆ: 2 ರ ಪರ ಮಾನ್ಯ ನ್ಯಾಯವಾದಿಗಳ ಹಾಗೂ 1, 3, 4 ಹಾಗೂ 5 ನೇ ಪ್ರತ್ಯರ್ಜಿದಾರರ ಪರ ಮಾನ್ಯ ಎಜಿಎ ರವರ ಹಾಗೂ ಪ್ರತ್ಯರ್ಜಿದಾರಸಂಖ್ಯೆ: 7 ರ ಪರ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಿರುತ್ತೇನೆ.

2. ಪ್ರತ್ಯರ್ಜಿದಾರಸಂಖ್ಯೆ: 6 ತಾಲ್ಲೂಕು ಪಂಚಾಯಿತಿಯ ಸದಸ್ಯರಾಗಿ ಹಾಗೂ ಅದೇ ಪಂಚಾಯತಿಯ ಅಧ್ಯಕ್ಷರಾಗಿಯೂ ಪ್ರತ್ಯರ್ಜಿದಾರಸಂಖ್ಯೆ: 7ರ ಚುನಾವಣೆಯಿಂದ ಬಾಧಿತರಾಗಿ ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿರುತ್ತಾರೆ.

3. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಪ್ರತ್ಯರ್ಜಿದಾರ ಸಂಖ್ಯೆ .1 ಪರಿಶಿಷ್ಟ ಪಂಗಡದ ಪ್ರವರ್ಗಕ್ಕೆ ಸೇರಿರುವಂಥ ನಾಯಕ ಸಮುದಾಯಕ್ಕೆ ಸೇರಿದವರಾಗಿದ್ದು, ಇದರಲ್ಲಿ ಏನೇ ಒಳಗೊಂಡಿದ್ದರೂ, ಈಕೆ ತನ್ನನ್ನು ಒಬಿಸಿ- ಎ ಪ್ರವರ್ಗಕ್ಕೆ ಸೇರಿರುವಂಥ ಬೆಸ್ತರ ಜಾತಿಗೆ ಸೇರಿದವಳೆಂದು ತಪ್ಪಾಗಿ ಪ್ರತಿನಿಧಿಸಿಕೊಂಡು ಒಬಿಸಿ- ಎ ಪ್ರವರ್ಗದ ಹೆಸರಿನಲ್ಲಿ ಮೀಸಲಿದ್ದಂಥ ಸ್ಥಾನಕ್ಕೆ ಚುನಾಯಿತಳಾಗಿರುತ್ತಾಳೆ.

4. ಅರ್ಜಿದಾರರು ಹಲವಾರು ಸಾಕ್ಷ್ಯಾಧಾರಗಳನ್ನು ಅವಲಂಬಿಸಿದ್ದಾರೆ ಮತ್ತು ಆ ಸಾಕ್ಷ್ಯಾಧಾರಗಳು ಪ್ರತ್ಯರ್ಜಿದಾರಸಂಖ್ಯೆ: 7 ರ ವಿರುದ್ಧದ ಆಪಾದನೆಗಳನ್ನು ದೋಷಾರೋಪಣೆ ಮಾಡುತ್ತವೆ ಹಾಗೂ ಪ್ರಮಾಣೀಕರಿಸುತ್ತವೆ.ಹಾಗಾಗಿ, ಸದರಿ ಸ್ಥಾನದಿಂದ ಪ್ರತ್ಯರ್ಜಿದಾರ ಸಂಖ್ಯೆ .7 ನ್ನು ತೆಗೆದು ಹಾಕಲು ಸಮರ್ಥನ ಕಾರಣವನ್ನು (ಕೋ ವಾರಂಟ್) ಹೊರಡಿಸುವಂತೆ ಕೋರಿರುವ ಪ್ರಸ್ತುತ ರಿಟ್ ಅರ್ಜಿಯು ಸಮರ್ಥನೀಯವಾಗಿದೆ ಎಂದು ಕ್ಲೇಮು ಮಾಡಿರುತ್ತಾರೆ.ಅಲ್ಲದೆ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಸಮರ್ಥನ ಕಾರಣವನ್ನು (ಕೋ ವಾರಂಟ್) ಹೊರಡಿಸುವುದಕ್ಕೆ ಸಂಬಂಧಿಸಿದಂತೆ ಕೋರಿರುವ ರಿಟ್ ಅರ್ಜಿಯು ಊರ್ಜಿತವಾಗಿರುತ್ತದೆಂದು ವಾದಿಸಲು ಶ್ರೀ ಯಮನಪ್ಪ ಸತ್ಯಪ್ಪ ಬಂದಿವಾದರ್ ಹಾಗೂ ಇತರರು ವಿರುದ್ಧ ಅಮಿನ್ಗಢ ಗ್ರಾಮ ಪಂಚಾಯತಿ ಹಾಗೂ ಇತರರು ಮೊಕದ್ದಮೆಯಲ್ಲಿನ ತೀರ್ಪನ್ನು ಉದಾಹರಿಸಿರುತ್ತಾರೆ ಹಾಗೂ ಮೇಲೆ ಹೇಳಿದ ತೀರ್ಪಿನ 12 ಹಾಗೂ 13 ನೇ ಪ್ಯಾರಾಗಳಲ್ಲಿ ಈ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆಂದು ವಾದಿಸಿರುತ್ತಾರೆ.

"12. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ 5 ನೇ ಪ್ರಕರಣವು ಗ್ರಾಮ ಪಂಚಾಯತಿಯ ರಚನೆಗೆ ಉಪಬಂಧ ಕಲ್ಪಿಸುತ್ತದೆ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಹಾಗೂ ' ಎ ' ಮತ್ತು ' ಬಿ ' ಪ್ರವರ್ಗಗಳಡಿ ಬರುವ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಸ್ಥಾನಗಳನ್ನು ಮೀಸಲಿರಿಸುವುದಕ್ಕೆ

ರಾಜ್ಯ ಚುನಾವಣಾ ಆಯೋಗಕ್ಕೆ ಅಧಿಕಾರ ನೀಡಿರುತ್ತದೆ.ಸದರಿ ಅಧಿಕಾರವನ್ನು ಚಲಾಯಿಸಿ, ಮೊದಲ ಪ್ರತ್ಯರ್ಜಿದಾರ ಗ್ರಾಮ ಪಂಚಾಯತಿಯಲ್ಲಿನ ವಾರ್ಡ್ಸಂಖ್ಯೆ: 1 ಕ್ಕೆ 2005 ನೇ ವರ್ಷದಲ್ಲಿ ನಡೆದ ಚುನಾವಣೆಯಲ್ಲಿ ಬಿಸಿಎಂ ' ಬಿ ' ಪ್ರವರ್ಗಕ್ಕೆ ಮೀಸಲಿರಿಸಿತ್ತು.ಆದ್ದರಿಂದ ಮೀಸಲಾತಿಯ ಹಿಂದುಳಿದ ವರ್ಗಗಳನ್ನು ಸುಧಾರಿಸುವ ಉದ್ದೇಶದೊಂದಿಗೆ ಕಲ್ಪಿಸಲಾದ ಸಂವಿಧಾನಾತ್ಮಕ ಯೋಜನೆಯ ಭಾಗವಾಗಿರುತ್ತದೆ.ಆದ್ದರಿಂದ, ಒಬ್ಬ ವ್ಯಕ್ತಿಯು ಯಾವ ನಿರ್ದಿಷ್ಟ ಹಿಂದುಳಿದ ವರ್ಗಕ್ಕೆ ಚುನಾಯಿತ ಸ್ಥಾನವು ಮೀಸಲಿರಿಸಲಾಗಿದೆಯೋ ಅಂಥ ವರ್ಗಕ್ಕೆ ಸೇರಿರದಿದ್ದ ಪಕ್ಷದಲ್ಲಿ ಹಾಗೂ ಸದರಿ ಪ್ರವರ್ಗಕ್ಕೆ ಸೇರಿರುವ ವ್ಯಕ್ತಿಯಂತೆ ನಟಿಸಿ, ಮೀಸಲಿರಿಸಿರುವ ಸ್ಥಾನಕ್ಕೆ ಚುನಾಯಿತನಾಗಿದ್ದಲ್ಲಿ, ಅಂಥ ಕೃತ್ಯವನ್ನು ಪಂಚಾಯತ್ರಾಜ್ ಅಧಿನಿಯಮದ ಶಾಸನಾತ್ಮಕ ಉಪಬಂಧಗಳ ಉಲ್ಲಂಘನೆ ಮಾತ್ರ ಆಗದೆ ಸಂವಿಧಾನಕ್ಕೆ ಮಾಡಿದ ವಂಚನೆಯೂ ಸಹ ಆಗಿರುತ್ತದೆಂದು ಹೇಳದಿರಲಾಗುವುದಿಲ್ಲ.

13. ಅರ್ಜಿದಾರರು, ಬಿಸಿಎಂ ' ಎ ' ಪ್ರವರ್ಗಕ್ಕೆ ಸೇರಿರುವ ಎರಡನೇ ಪ್ರತ್ಯರ್ಜಿದಾರರು, ತಾನು ಬಿಸಿಎಂ ' ಬಿ ' ಪ್ರವರ್ಗಕ್ಕೆ ಸೇರಿರುತ್ತೇನೆಂದು ಸುಳ್ಳು ಕೇಮನ್ನು ಮಾಡಿ ಬಿಸಿಎಂ ' ಬಿ ' ಪ್ರವರ್ಗಕ್ಕೆ ಮೀಸಲಿರುವಂಥ ವಾರ್ಡ್ಸಂಖ್ಯೆ: 1 ರಿಂದ ಮೊದಲ ಪ್ರತ್ಯರ್ಜಿದಾರ ' ಗ್ರಾಮ ಪಂಚಾಯಿತಿಯ ಸದಸ್ಯನಾಗಿ ಚುನಾಯಿತನಾಗುವ ಮೂಲಕ ವಂಚನೆ ಎಸಗಿದ್ದಾನೆಂದು ನಿಸ್ಸಂದೇಹವಾಗಿ ರುಜುವಾತು ಪಡಿಸಿರುತ್ತಾರೆ.

5. ಇದಕ್ಕೆ ಪ್ರತಿಯಾಗಿ, 2 ಹಾಗೂ 3 ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಕುರಪತಿ ಮರಿಯಾದಾಸ್ -ವಿರುದ್ಧ-ಡಾ.ಅಂಬೇಡ್ಕರ್ ಸೇವಾ ಸಮಾಜನ್ ಹಾಗೂ ಇತರರು ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಚ ನಿರ್ಣಯವನ್ನು ಉದಾಹರಿಸಿರುತ್ತಾರೆ ಹಾಗೂ 23 ಹಾಗೂ 24 ನೇ ಪ್ಯಾರಾಗಳ ಕಡೆಗೆ ಈ ನ್ಯಾಯಾಲಯದ ಗಮನವನ್ನು ಸೆಳೆದಿದ್ದು, ಅವುಗಳನ್ನು ಈ ಮುಂದಿನಂತೆ ಓದಲಾಗಿರುತ್ತದೆ:

"23. ಪ್ಯಾರಾ 8 ರಲ್ಲಿ ಅರ್ಜಿಗೆ ಪೂರಕವಾಗಿ ಅಫಿಡಾವಿಟ್ಟನ್ನು ನಾವು ಗಮನಿಸಿದಾಗಲೂ ಸಹ, ನಿರ್ದಿಷ್ಟವಾಗಿ, ವಾರ್ಡ್ಸಂಖ್ಯೆ: 8 ಪರಿಶಿಷ್ಟ ಜಾತಿಗೆ ಸೇರಿರುವ ವ್ಯಕ್ತಿಗೆ ಮೀಸಲಿರಿಸಲಾಗಿತ್ತು.ಆ ವಾರ್ಡಿನಿಂದ ಅಪೀಲುದಾರನು ತಾನು ಸ್ವತಃ ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಯಾಗಿರುವುದಾಗಿ ಹೇಳಿಕೊಂಡು ಚುನಾವಣೆಗೆ ಸ್ಪರ್ಧಿಸಿದ್ದ ನೆಂಬುದನ್ನು ನಿರ್ದಿಷ್ಟವಾಗಿ ಸೂಚಿಸುತ್ತದೆ.9 ನೇ ಪ್ಯಾರಾವು, ಅಪೀಲುದಾರನು ಅಧ್ಯಕ್ಷನಾಗಿ ಚುನಾಯಿತನಾಗಿರುವುದರ ಬಗ್ಗೆ ವಿವರಿಸುತ್ತದೆ.ಪ್ಯಾರಾ 30 ಸಹ, ಅರ್ಜಿದಾರನು ತಾನು ಪರಿಶಿಷ್ಟ ಜಾತಿಗೆ ಸೇರಿದವನೆಂದು ಸ್ವತಃ ಸುಳ್ಳು ಕ್ಲೇಮು ಮಾಡಿ ಸಾರ್ವಜನಿಕ ಸ್ಥಾನವನ್ನು ಕಸಿದುಕೊಂಡಿದ್ದಾನೆಂದು ಆತನ ವಿರುದ್ಧ ದೂರನ್ನು ದಾಖಲಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ.33 ನೇ ಪ್ಯಾರಾದಲ್ಲಿ, ಮೊದಲನೇ ಅರ್ಜಿದಾರನು, ಚುನಾವಣಾ ಅರ್ಜಿಯ ರೂಪದಲ್ಲಿ ಒಂಭತ್ತನೇ ಪ್ರತ್ಯರ್ಜಿದಾರನ ಆಯ್ಕೆಯನ್ನು ಪ್ರಶ್ನಿಸಲು ಯಾವುದೇ ಮಾರ್ಗವಿರುವುದಿಲ್ಲವೆಂದು ವಾದಿಸಲಾಗಿರುತ್ತದೆ.ಆದ್ದರಿಂದ, ಸಮರ್ಥನ ಕಾರಣದ ರಿಟ್ಗೆ ಸಂಬಂಧಿಸಿದಂತೆ ಮಾತ್ರ ರಿಟ್ ಅರ್ಜಿಯಲ್ಲಿ ಕೋರಲಾಗಿದೆಯೆಂದು ಸ್ಪಷ್ಟವಾಗಿ ಸೂಚಿಸಲಾಗಿದ್ದರೂ, ಇದರಲ್ಲಿನ ಅರ್ಜಿದಾರನು ಪರಿಶಿಷ್ಟ ಜಾತಿಗೆ ಸೇರಿರಲಿಲ್ಲ ಎಂಬ ಕಾರಣದ ಮೇಲೆ

24. ಸಮರ್ಥನ ಕಾರಣ (ಕೊ ವಾರಂಟ್) ರಿಟ್ ಅನ್ನು ಮೊದಲನೆಯದಾಗಿ ಕೌನ್ಸಿಲರ್ ಆಗಿ, ಎರಡನೆಯದಾಗಿ ಅಧ್ಯಕ್ಷನಾಗಿ ಅಪೀಲುದಾರನು ಆಯ್ಕೆಯಾಗಿರುವುದನ್ನು ಅನೂರ್ಜಿತಗೊಳಿಸಲು ಅಥವಾ ರದ್ದುಪಡಿಸಲು ಮಾತ್ರ ಕೋರಬಹುದಾಗಿತ್ತು ಹಾಗೂ ಅದು ಚುನಾವಣಾ ಅರ್ಜಿಯ ಮೂಲಕ ಮಾತ್ರ ಸಾಧ್ಯವಾಗುತ್ತದೆ ಎಂಬ ಸಂಗತಿಯು ರಿಟ್ ಅರ್ಜಿದಾರರಿಗೆ ಸ್ವತಃ ತಿಳಿದಿತ್ತು ಎಂಬುದು ರಿಟ್ ಅರ್ಜಿಯಿಂದ ಮತ್ತಷ್ಟು

ಸ್ಪಷ್ಟವಾಗುತ್ತದೆ.ರಿಟ್ ಅರ್ಜಿಯನ್ನು ಸುರಕ್ಷಿತ ಪರಿಭಾಷೆಯಲ್ಲಿ ಸ್ಪಷ್ಟವಾಗಿ ರೂಪಿಸಲಾಗಿದ್ದರೂ, ಹಾಗೂ ಇದು ಸಮರ್ಥನ ಕಾರಣದ ರಿಟ್ನ ಉದ್ದೇಶಕ್ಕಾಗಿ ಎಂಬಂತೆ ಅದನ್ನು ಪ್ರತಿನಿಧಿಸಲಾಗಿದ್ದರೂ ಪರ್ಯಾಪ್ತವಾಗಿರುತ್ತವೆ.ನನ್ನ ಅಭಿಪ್ರಾಯದಲ್ಲಿ ಮೇಲ್ಕಂಡ ಅ ಎರಡು ನಿರ್ಣಯಗಳು, ಆ ಸ್ವರೂಪದ ರಿಟ್ ಅರ್ಜಿಯು ಸಮರ್ಥನೀಯವಾಗಿರಲಿಲ್ಲ ಎ ಂ ಬ ಅಭಿಪ್ರಾಯ ತಾಳಲು ಸಮರ್ಥನೀಯವಾಗಿವೆ.

6. ಪ್ರತ್ಯರ್ಜಿದಾರಸಂಖ್ಯೆ: 7 ರ ಜಾತಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರವು ಯಾವುದೇ ನಿರ್ಣಯಗಳನ್ನು ನೀಡಿಲ್ಲವೆಂದು ಹಾಗೂ ಪ್ರತ್ಯರ್ಜಿದಾರ ಸಂಖ್ಯೆ.ಇನ್ನು ಅನರ್ಹಗೊಳಿಸಲು ಯಾವುದೇ ದೂರುಗಳು ಅಥವಾ ಅರ್ಜಿಗಳನ್ನು ದಾಖಲಿಸಿರುವುದಿಲ್ಲವೆಂದು ಮಾನ್ಯ ಸಹಾಯಕ ಸರ್ಕಾರಿ ವಕೀಲರು ನಿವೇದಿಸಿಕೊಂಡಿರುತ್ತಾರೆ.

7. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿದ ತರುವಾಯ ಹಾಗೂ ವಾಸ್ತವಾಂಶಗಳನ್ನು ದೃಢಪಡಿಸಿದ ತರುವಾಯ, ರಿಟ್ ಅರ್ಜಿಯು ಊರ್ಜಿತವಾಗಿದೆಯೇ?ಎಂಬ ಸಣ್ಣ ಪ್ರಶ್ನೆಯೊಂದು ಪರಿಗಣನೆಗೆ ಉದ್ಭವಿಸುತ್ತದೆ.

8. ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ರಾಜ್ ಅಧಿನಿಯಮ, 1993 ರ 127 ನೇ ಪ್ರಕರಣವು, ಅಭ್ಯರ್ಥಿಯ ಅರ್ಹತೆಗಳಿಗೆ ಸಂಬಂಧಿಸಿದ ಉಪಬಂಧಗಳನ್ನು ಕಲ್ಪಿಸುತ್ತದೆ.( 2) ನೇ ಉಪ-ಪ್ರಕರಣವು, ಪರಿಶಿಷ್ಟ ಜಾತಿಗಳಿಗೆ ಅಥವಾ ಪರಿಶಿಷ್ಟ ಪಂಗಡಗಳಿಗೆ ಅಥವಾ ಹಿಂದುಳಿದ ವರ್ಗಗಳಿಗೆ ಅಥವಾ ಮಹಿಳೆಯರಿಗೆ ಮೀಸಲಿರಿಸಿದ ಸ್ಥಾನದ ಸಂಬಂಧದಲ್ಲಿ, ಅಂಥ ವ್ಯಕ್ತಿಯು ಆ ಜಾತಿಗಳು ಅಥವಾ ಪಂಗಡಗಳ ಅಥವಾ ವರ್ಗಗಳ ವ್ಯಕ್ತಿ ಅಥವಾ ಮಹಿಳೆಯರಾಗಿದ್ದ ಹೊರತು ತಾಲ್ಲೂಕು ಪಂಚಾಯಿತಿಯಲ್ಲಿನ ಸ್ಥಾನವನ್ನು ತುಂಬಲು ಪ್ರಾದೇಶಿಕ ಚುನಾವಣಾ ಕ್ಷೇತ್ರದಿಂದ ಆಯ್ಕೆಗೊಳ್ಳಲು ಅರ್ಹನಾಗಿರತಕ್ಕದ್ದಲ್ಲವೆಂಬುದನ್ನು ಕಡ್ಡಾಯಗೊಳಿಸುತ್ತದೆ.128 ನೇ ಪ್ರಕರಣವು, ಸದಸ್ಯರು ಅಥವಾ ವ್ಯಕ್ತಿಯನ್ನು ಆ ಸ್ಥಾನವನ್ನು ಹೊಂದುವುದರಿಂದ ಅನರ್ಹಗೊಳಿಸುವ ಬಗ್ಗೆ ವಿವರಿಸುತ್ತದೆ ಹಾಗೂ 129 ನೇ ಪ್ರಕರಣದ ( 2) ನೇ ಉಪ-ಪಕರಣವು, ಸಂಬಂಧಪಟ್ಟ ಸದಸ್ಯನಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ.

9. ಮೇಲೆ ಹೇಳಿದ ಉಪಬಂಧಗಳ ಸಂಯೋಜಿತ ಓದಿನಿಂದ, ಅನರ್ಹತೆಯು ಸ್ವಯಂಚಾಲಿತವಾಗಿರುವುದಿಲ್ಲ.ಆದರೆ, ಕಾನೂನಿಗನುಸಾರವಾಗಿ ಪ್ರಜ್ಞಾಪೂರ್ವಕವಾಗಿ ನಡೆಸುವ ವ್ಯವಹರಣೆಗಳ ಫಲಿತಗಳಾಗಿರುತ್ತದೆಂಬುದು ಸ್ಪಷ್ಟವಾಗುತ್ತದೆ.ಸಂಬಂಧಪಟ್ಟ ಸದಸ್ಯನಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ ತರುವಾಯ ಒಂದು ನಿರ್ಧಾರಕ್ಕೆ ಬರಲು ಪ್ರಾಧಿಕಾರಕ್ಕೆ ಆಜ್ಞಾಪಿಸುವುದರಿಂದ ಹಾಗೂ ವರದಿಯನ್ನು ಸ್ವೀಕರಿಸಿದ ಮೇಲೆ ಮಾತ್ರ ರಾಜ್ಯ ಚುನಾವಣಾ ಆಯೋಗದಲ್ಲಿ ಅಧಿ ಕಾರವ್ಯಾಪ್ತಿಯು ನಿಹಿತವಾಗಿರುವುದರಿಂದ 129 ನೇ ಪ್ರಕರಣದ ( 2) ನೇ ಉಪ-ಪ್ರಕರಣದ ಉಪಬಂಧಗಳು ಈ ಅಂಶದ ಮೇಲಿನ ಯಾವುದೇ ಚರ್ಚೆಯನ್ನು ನಿವಾರಿಸುತ್ತದೆ.ಹಾಗಾಗಿ, ವರದಿ ಇಲ್ಲದಿದ್ದಾಗ, ರಾಜ್ಯ ಚುನಾವಣಾ ಆಯೋಗವು ಕೂಡ, ಸದಸ್ಯರ ಸ್ಥಾನವು ಖಾಲಿಯಾಗಿದೆಯೆಂದು ಘೋಷಿಸಲು ( 2) ನೇ ಉಪ-ಪ್ರಕರಣದ ಉಪಬಂಧಗಳನ್ನು ಅನ್ವಯಿಸಲು ಸಾಧ್ಯವಾಗುವುದಿಲ್ಲ.

10. ಒಪ್ಪಿಕೊಂಡಿರುವಂತೆ, ಪ್ರಸ್ತುತ ಮೊಕದ್ದಮೆಯಲ್ಲಿ ಅರ್ಜಿದಾರರು, ಅಧಿಕಾರಿಗಳ ಎದುರಾಗಲೀ ಅಥವಾ ರಾಜ್ಯ ಚುನಾವಣಾ ಆಯೋಗದ ಎದುರಾಗಲೀ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ ಹಾಗೂ ಈ

ನ್ಯಾಯಾಲಯವನ್ನು ಸಂಪರ್ಕಿಸಿರುತ್ತಾರೆ.ಅಲ್ಲದೆ, ಐಎಲ್ಆರ್ 2008 ಕೆಎಆರ್ 3854 ರಲ್ಲಿನ ನಿರ್ಣಯದ ಮೇಲಿನ ಅವಲಂಬನೆಯು ತಪ್ಪಾಗಿದೆ.ಸದರಿ ನಿರ್ಣಯದ 3 ನೇ ಪ್ಯಾರಾವನ್ನು ಓದಿದಾಗ, ತಹಸೀಲ್ದಾರರು, ಕಾನೂನಿಗನುಸಾರವಾಗಿ ವ್ಯವಹರಣೆಗಳನ್ನು ನಡೆಸಿದ ತರುವಾಯ ಜಾತಿ ಪ್ರಮಾಣಪತ್ರವನ್ನು ರದ್ದುಪಡಿಸಲು ನಿರ್ಣಯ ಕೈಗೊಳ್ಳುವ ಮೊದಲು ರಿಟ್ ಅರ್ಜಿಯನ್ನು ಸಲ್ಲಿಸಲಾಗಿತ್ತು ಎಂಬ ಅಂಶ ಸ್ಪಷ್ಟವಾಗುತ್ತದೆ.ವಿಷಯದ ಆ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು ದಾಖಲೆಗಳ ನ್ಯಾಯಾಲಯವಾಗಿರುವುದರಿಂದ ಭಾರತ ಸಂವಿಧಾನದ 226 ನೇ ಅನುಚ್ಛೇದದಡಿಯಲ್ಲಿ ತನ್ನ ಅಧಿಕಾರವ್ಯಾಪ್ತಿಯನ್ನು ಚಲಾಯಿಸಿ ವಾಸ್ತವಿಕ ವಿವಾದಾಂಶಗಳ ನ್ಯಾಯ ನಿರ್ಣಯಕ್ಕೆ ಸಾಮಾನ್ಯವಾಗಿ ಅವಕಾಶ ಕೊಡುವುದಿಲ್ಲ ಹಾಗೂ ಅರ್ಜಿದಾರರು ಮಾಡಿದ ಆಪಾದನೆಯ ನ್ಯಾಯ ನಿರ್ಣಯವು ಚಲಾವಣೆಯಂತೆಯೇ ಒಳಗೊಂಡಿರುತ್ತದೆ.

11. ಪ್ರಸ್ತುತ ಪ್ರಕರಣದಲ್ಲಿ, ರಿಟ್ ಅರ್ಜಿಯಲ್ಲಿ ಹೇಳಿರುವ ಆಪಾದನೆಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಾಧಿಕಾರವು ಯಾವುದೇ ನಿರ್ಣಯ ನೀಡಿರುವುದಿಲ್ಲ.ಅದಲ್ಲದೆ, ಶಾಸನಾತ್ಮಕ ಉಪಬಂಧಗಳ ಹಿನ್ನೆಲೆಯಲ್ಲಿ, ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯದಲ್ಲಿ, ಪ್ರಸ್ತುತ ರಿಟ್ ಅರ್ಜಿಯು ಅಪಕ್ವವಾಗಿದ್ದು ಹಾಗೂ ಸಮರ್ಥನೀಯವಾಗಿರುವುದಿಲ್ಲ.

12. ತದನುಸಾರವಾಗಿ, ರಿಟ್ ಅರ್ಜಿಯು ವಿಫಲವಾಗಿದ್ದು, ಇದನ್ನು ವಜಾಗೊಳಿಸಲಾಗಿರುತ್ತದೆ.ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.ರಿಟ್ ಅರ್ಜಿಯನ್ನು ವಜಾ ಮಾಡುವುದರಿಂದ ಕಾನೂನಿನಡಿಯಲ್ಲಿ ಅರ್ಜಿದಾರನಿಗೆ ಲಭ್ಯವಾಗುವಂಥ ಎಲ್ಲಾ ಪರಿಹಾರಗಳನ್ನು ಪಡೆದುಕೊಳ್ಳುವುದರಿಂದ ಆತನನ್ನು ಪ್ರತಿಪಾದಿಸಿದಂತಾಗುವುದಿಲ್ಲ.